ಅಸಲು ದಾವಾ ನಂ.**87/2018**
ಪಿ.ಡಬ್ಲೂ.**01**

<u>ಸಾಕ್ಷಿಗೆ ದಿನಾಂಕಃ **19.11.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ನಂ.**20** ಮತ್ತು **21** ಪರ ಶ್ರೀ.**S.N.S.** ವಕೀಲರಿಂದ.</u>

8. ನಾನು ವಾದ ಪತ್ರದಲ್ಲಿ ಹೇಳಿರುವ ಪ್ರಕಾರ ಮತ್ತು ನಾನು ಹಾಜರು ಪಡಿಸಿದ ನಿ.ಪಿ.20 ರಪ್ರಕಾರ 2000 ನೇ ಸಾಲಿನಲ್ಲಿ ಮರಿಲಿಂಗಪ್ಪ ಮತ್ತು ಅವರ ಸಹೋದರರ ನಡುವೆ ವಾಟ್ನಿ ಆಗಿರುತ್ತದೆ ಎಂದರೆ ಸಾಕ್ಷಿ ವಾಟ್ನಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದಾವೆ ಹೂಡುವ ಕಾಲಕ್ಕೆ ರಿ.ಸ.ನಂ. 612 ಕ್ಷೇತ್ರ 21 ಎಕರೆ 30 ಗುಂಟೆ ಜಮೀನು ಶೀಲಾ ಶಿವಪ್ಪ ಮರೆಣ್ಣರವರ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ಖೊಟ್ಟಿ ರೀತಿಯಲ್ಲಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

9. ನಾನು ನನ್ನ ವಾದ ಪತ್ರದಲ್ಲಿ ರಿ.ಸ.ನಂ.612 ಒಟ್ಟು 6 ಪಟ್ಟಿಗಳಾಗಿ ಕಾಣಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಕಾರ ರಿ.ಸ.ನಂ.612 ಜಮೀನು 2000 ನೇ ಸಾಲಿನಲ್ಲಿ 6 ನೇ ಪ್ರತಿವಾದಿ ರವರ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ಸರಿಯಲ್ಲ. ನಾವೆಲ್ಲರೂ ಸಹ ಸದರಿ ಡ ನಂಬರ ಸರಿಯಾಗಿ ಇದ್ದ ಕಾರಣ ಅದರ ಬಗ್ಗೆ ನಮಗೆ ಮಾಹಿತಿ ಇದ್ದ ಕಾರಣ ನಾವು ಎಂದು ಸಹ ಸದರಿ ಡ ನಂಬರನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಡ ನಂಬರ ಪ್ರಕಾರ 6 ನೇ ಪ್ರತಿವಾದಿರವರು 2000 ನೇ ಸಾಲಿನಿಂದ ರಿ.ಸ.ನಂ: 612 ರ ಪ್ರತ್ಯೇಕ ಮಾಲೀಕಳಾಗಿ ಕಬ್ಜಾ ಮತ್ತು ವಹಿವಾಟದಲ್ಲಿ ಇದ್ದರು ಎಂದರೆ ಸರಿಯಲ್ಲ. ದಿ: 10.12.2007 ರಂದು 6 ನೇ ಪ್ರತಿವಾದಿ ಇವಳೂ ಸದರಿ ಆಸ್ತಿಯ ಪೈಕಿ 11 ಎಕರೆ 30 ಗುಂಟೆ ಜಮೀನನ್ನು ಶ್ರೀಶೈಲ ದಾಸಮ ಈತನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಸದರಿ ಜಮೀನನ್ನು ಶ್ರೀಶೈಲರವರು ದಿ: 17.11.2009

ರಂಧು ವೆಂಕಪ್ಪ ಭೀಮಪ್ಪ ಹಂದಿಗನೂರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

10. ತದನಂತರ ದಿ: 24.04.2015 ರಂದು ಸದರಿ ವೆಂಕಪ್ಪ ಹಂದಿಗನೂರವರು 20 ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 2000 ನೇ ಸಾಲಿನಿಂದ ಪೂರ್ವದಲ್ಲಿ ನಾವೆಲ್ಲರೂ ಸಹೋದರಿಯರು ಸಹ ನಮ್ಮ ಗಂಡನ ಮನೆಯಲ್ಲಿ ವಾಸವಿದ್ದ ಕಾರಣ ನಾವು ಎಂದಿಗೂ ಸಹ ದಾವಾ ಆಸ್ತಿಯ ಕಬ್ಜಾ ಮತ್ತು ವಹಿವಾಟದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 2000 ನೇ ಸಾಲಿನಲ್ಲಿ ಆದ ವಾಟ್ನಿ ಪ್ರಕಾರ ಎಲ್ಲರು ನಡೆದುಕೊಂಡು ಬಂದು ವಾಟ್ನಿಯಲ್ಲಿ ತಮ್ಮ ಪಾಲಿಗೆ ಬಂದ ಜಮೀನಿನಲ್ಲಿ ಪ್ರತ್ಯೇಕವಾಗಿ ಕಬ್ಜಾ ಮತ್ತು ವಹಿವಾಟದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು 2000 ನೇ ಸಾಲಿನಿಂದ ದಾವಾ ಆಸ್ತಿಯ ಕಬ್ಜಾ ಮತ್ತು ವಹಿವಾಟದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 11 ಎಕರೆ 30 ಗುಂಟೆ ಜಮೀನು ಮಾರಾಟ ಮಾಡಿದ ಬಳಿಕ ಈಗ 20 ನೇ ಪ್ರತಿವಾದಿ ಸದರಿ ಆಸ್ತಿಯ ಕಬ್ಜಾ ಮತ್ತು ವಹಿವಾಟದಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ವಾಟ್ನಿ ಆಗಿರುವ ವಿಚಾರ, ಖರೀದಿ ಮಾಡಿದ ವಿಚಾರ ಮತ್ತು ಜಮೀನುಗಳನ್ನು ಹೊಡೆದಿರುವ ವಿಚಾರ ಗೊತ್ತಿದ್ದರ ಸಹ ನ್ಯಾಯಾಲಯದ ಮುಂದೆ ಬಂದು ಖೊಟ್ಟಿ ಪ್ರಮಾಣ ಪತ್ರ ಸಲ್ಲಿಸಿ ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ಎಲ್ಲಾ ವಿಚಾರ ಗೊತ್ತಿದ್ದರು ಸಹ ಅದನ್ನು ಮುಚ್ಚಿಟ್ಟು 18 ವರ್ಷಗಳ ನಂತರ ಈ ದಾವೆಯನ್ನು ನ್ಯಾಯಾಲದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾವು ಮಾಡಿದ ದಾವೆ ಖೊಟ್ಟಿ ಇದ್ದು ಅದಕ್ಕೆ ಪೂರಕವಾಗಿ ನೀಡಿದ ಸಾಕ್ಷಿಯು ಸಹ ಖೊಟ್ಟಿ ಆಗಿರುತ್ತದೆ ಎಂದರೆ ಸರಿಯಲ್ಲ. 20 ನೇ ಪ್ರತಿವಾದಿ ಈಗ ತಾನು ಖರೀದಿ ಮಾಡಿದ ಜಮೀನಿನಲ್ಲಿ ಸಾಕಷ್ಟು ಅಭಿವೃದ್ಧಿಗೊಳಿಸಿದ ಕಾರಣ ಮತ್ತು ಸದರಿ ಜಮೀನಿನ ಮಾರುಕಟ್ಟೆ ಬೆಲೆ ಹೆಚ್ಚಾಗಿದ ಕಾರಣ ಅಸುಯೆಗೊಂಡು ಈ ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವೆಲ್ಲರೂ

ಸಹೋದರಿಯರು ಖರೀದಿದಾರಾರಿಗೆ ಮೋಸ ಮಾಡುವ ಸಂಬಂಧ ಈ ದಾವೆಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕೊಟ್ಟು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

(ಎ.ಆರ್.ಎ.ಮುಲ್ಲಾ)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ. ಸಿಂದಗಿ.